**ಪುನರಾರಂಭಿಸಲಿ**

ಮಾನ್ಯರೆ,  ಭಾರತೀಯ ಚರಿತ್ರೆಯ ಪುಟಗಳಲ್ಲಿ ಅಶೋಕ, ಹರ್ಷ, ಚಂದ್ರಗುಪ್ತಮೌರ್ಯ ಮುಂತಾದ ಹೆಸರುಗಳು ಇಂದಿಗೂ ನಮ್ಮ ಸ್ಮೃತಿ ಪಟಲದಲ್ಲಿ ಶಾಶ್ವತವಾಗಿ ಉಳಿದಿದೆ. ಆದರೆ ಈಗಿನ ನಮ್ಮ ಪ್ರಜಾಸರ್ಕಾರ ಈ ರೀತಿ ಜನಾನುರಾಗದ ಕಾರ್ಯವನ್ನು ನಡೆಸುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಜನತಾಸರ್ಕಾರವು ನಿತ್ಯ ಜೀವನದಲ್ಲಿ ಬೇಕಾಗಿರುವ ಸಾರಿಗೆ ಪ್ರಯಾಣದ ದರಗಳನ್ನು ಏರಿಸಿ ಬಡಜನತೆಗೆ ತೊಂದರೆಕಲ್ಪಿಸಿದೆ. ಬಡವರಾದವರು ಹೆಚ್ಚಿನ ಬಾಡಿಗೆಯನ್ನು ಕೊಡಲಾಗದೆ ನಗರದ ಮಧ್ಯಭಾಗದಲ್ಲಿ ವಾಸಮಾಡಲು ಸಾಧ್ಯವಿಲ್ಲ. ಆದ್ದರಿಂದ ಅವರು ನಗರದ ಹೊರವಲಯದಲ್ಲಿ ವಾಸಿಸಬೇಕಾಗಿದೆ. ಇವರ ಕಾರ್ಯಕ್ಷೇತ್ರ ನಗರದಲ್ಲಿರುತ್ತದೆ. ಹೊರವಲಯದಿಂದ ನಗರಕ್ಕೆ ಬರುವ ಏಕಮೇವ ಮಾರ್ಗ ನಗರ ಸಾರಿಗೆ ಸಂಸ್ಥೆ. ಇತ್ತೀಚೆಗೆ ಜನಗಳು ತಮ್ಮ ಇಚ್ಛೆಯಂತೆ ಪ್ರಯಾಣ ಮಾಡುವ ೩ರೂ ಹಾಗೂ ೫ರೂಗಳ ಚೀಟಿಗಳನ್ನು ವಿತರಣೆ ಮಾಡಿ ನಿರ್ವಾಕರ ಮೂಲಕ ಜನತೆಗೆ ಆಗುತ್ತಿದ್ದ ತೊಂದರೆಯನ್ನು ತಪ್ಪಿಸಿದ್ದರು. ಜನತೆಯ ಅಭಿಪ್ರಾಯವನ್ನು ತಿಳಿಯದೆ ಈಗ ಇದನ್ನು ನಿಲ್ಲಿಸಿದಂತೆ ಕಾಣುತ್ತದೆ. ಈ ಪದ್ಧತಿ ನಿಲ್ಲಿಸಲು ಜನೋಪಕಾರಿ ಸಂಸ್ಥೆ ನೀಡಿರುವ ಕಾರಣ, 'ದುರುಪಯೋಗವಾಗುತ್ತಿದೆ' ಎಂದು ಇದನ್ನು ಯಾರು ದುರುಪಯೋಗಮಾಡುತ್ತಿದ್ದರು ಎಂಬುದನ್ನು ತಿಳಿಸಿಲ್ಲ.
ಈ ಪದ್ಧತಿಯನ್ನು ಪುನರಾರಂಭಿಸಲಿ.

ಯಲಹಂಕ ಜಿ.ಪಿ. ವಿಮಲ

Apr 22nd 1986 Prajavani Punararambisali